

# ಹೋದ ಕೈ ಮತ್ತೆ ಬಂತು ಬದುಕುವ ಛಲ ತಂತು

ಅಪಘಾತದಲ್ಲಿ ಕೈಗಳನ್ನು ಕಳೆದುಕೊಂಡಿದ್ದ ಶ್ರೇಯಾ ಸಿದ್ದನಗೌಡರ್ 'ಕೈಗಳ ಮರುಜೋಡಣೆ' ಶಸ್ತ್ರಚಿಕಿತ್ಸೆಯ ಮೂಲಕ ಬದುಕನ್ನು ಮತ್ತೆ ಕಟ್ಟಿಕೊಂಡಿದ್ದಾರೆ. ಆಕೆಗೆ ಜೋಡಿಸಿರುವುದು ಪುರುಷನ ಕೈಗಳನ್ನು. ಮಹಿಳೆಗೆ ಪುರುಷನ ಕೈಗಳನ್ನು ಜೋಡಿಸಿದ ಮೊದಲ ಯಶಸ್ವಿ ಶಸ್ತ್ರಚಿಕಿತ್ಸೆ ಶ್ರೇಯಾ ಅವರದು. ಆಕೆಯ ಜೀವನದ ಸಂಘರ್ಷದ ಕಥೆ, ಹತಾಶೆಯ ಬಾವಿಯಲ್ಲಿ ಮುಳುಗಿದವರಲ್ಲೂ ಜೀವನಪ್ರೀತಿ ಹುಟ್ಟಿಸುವಷ್ಟು ಚೇತೋಹಾರಿ. ಈ ವಿಶಿಷ್ಟ ಜೀವನಕಥನವನ್ನು ಡಿ.ಎಂ. ಘನಶ್ಯಾಮ 'ಸುಧಾ' ಓದುಗರಿಗಾಗಿ ಶ್ರೇಯಾ ಅವರ ಮಾತುಗಳಲ್ಲೇ ಕಟ್ಟಿಕೊಟ್ಟಿದ್ದಾರೆ.